ಅವಶ್ಯ ವಸ್ತುಗಳ ವಿತರಣೆ ಬಗ್ಗೆ.

೧೮೫ ಶ್ರೀ ವಂಶ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅವಶ್ಯ ವಸ್ತುಗಳ ಕಾನೂನಿನ ಅವಧಿಯನ್ನು ವಿಸ್ತರಿಸಲು ಕಾರಣವೇನು ?

ಆ) ಆಹಾರ ಸಾಮಗ್ರಿಗಳನ್ನು ಬಂಧನಕ್ಕೆ ಒಳಪಡಿಸಿದಾಗ (ಜಪ್ತಿ) ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡದಿರುವುದಕ್ಕೆ ಕಾರಣವೇನು ?

ಇ) ಹಲವಾರು ಅಧಿಕಾರಿಗಳು ಕಾಯಿದೆಯ ದುರುಪಯೋಗ ಪಡೆಯುತ್ತಿದ್ದು, ವ್ಯಾಪಾರಸ್ಥರಿಗೆ ಹಾಗೂ ರೈತರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಈ) ಸಾಮಾನ್ಯ ಹಾಗೂ ಅತಿ ಚಿಕ್ಕ ವ್ಯಾಪಾರಸ್ಥರನ್ನು ಕಾಯಿದೆಯ ಪರಿಮಿತಿಯಲ್ಲಿ ತಂದಿದ್ದನ್ನು ಕೈ ಬಿಡಲು ಸರ್ಕಾರಕ್ಕಿರುವ ತೊಂದರೆಯೇನು ?

ಉ) ಸರ್ಕಾರದವರು ಒಂದೇ ಇಲಾಖೆಯಿಂದ ಇದನ್ನು ನಿಯಂತ್ರಿಸಲು ಯಾವ ಕ್ರಮ ಕೈಕೊಳ್ಳಲಾಗುವುದು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ(ಆಹಾರ ಮಂತ್ರಿ ನಾಗರೀಕ ಸರಬರಾಜು ಮಂತ್ರಿಗಳು).—

ಅ) ಭಾರತ ಸರ್ಕಾರಕ್ಕೆ ಸಂಬಂಧಿಸಿರುವುದರಿಂದ ಉದ್ಭವಿಸುವುದಿಲ್ಲ.

ಆ) ಅವಶ್ಯ ವಸ್ತುಗಳ ಕಾಯಿದೆ ೧೯೫೫ರ ಸೆಕ್ಷನ್ ೬ಎ ಪ್ರಕಾರ, ಆಹಾರ ಪದಾರ್ಥ ಹಾಗೂ ಇತರೇ ಅವಶ್ಯ ವಸ್ತುಗಳನ್ನು ಜಪ್ತಿ ಮಾಡಿದಾಗ ಅವುಗಳನ್ನು ತಕ್ಷಣವೇ ಜಿಲ್ಲಾಧಿಕಾರಿಗಳ ಸಮ್ಮುಖ ತನಿಖೆಗೆ ಒಳಪಡಿಸಬೇಕಾಗುತ್ತದೆ. ಆದಂದರಿಂದ ವೈಯಕ್ತಿಕ ಜಾಮೀನಿನ ಮೇಲೆ ಆಹಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ.

ಇ) ನಿರ್ದಿಷ್ಟವಾದ ದೂರು ಬಂದು, ವಿಚಾರಣೆಯಲ್ಲಿ ದುರುಪಯೋಗವಾಗಿರುವುದು ನಿಜವಾದಲ್ಲಿ ತಪ್ಪಿತಸ್ಥ ಅಧಿಕಾರಿಯ ಮೇಲೆ ಕ್ರಮ ಜರುಗಿಸಲಾಗುವುದು.

ಈ) ಸಾಮಾನ್ಯ ಹಾಗೂ ಅತೀ ಚಿಕ್ಕ ವ್ಯಾಪಾರಸ್ಥರನ್ನು ಕಾಯಿದೆ ಪರಿಮಿತಿಯಲ್ಲಿ ಕೈ ಬಿಡಲಾಗಿದೆ. ಯಾವುದೇ ನಿಗದಿತ ಸಮಯದಲ್ಲಿ ಒಟ್ಟು ಆಹಾರ ಧಾನ್ಯಗಳ ಪ್ರಮಾಣ ೨೦ ಕ್ವಿಂ. ಸಕ್ಕರೆ ಪ್ರಮಾಣ ೫ ಕ್ವಿಂ. ಖಾದ್ಯ ತೈಲದ ಪ್ರಮಾಣ ೫ ಕ್ವಿಂ. ಖಾದ್ಯ ತೈಲ ಬೀಜ ೩೦ ಕ್ವಿಂ. ಬೆಲ್ಲ ೨೦ ಕ್ವಿಂ ಕ್ಕಿಂತ ಮಿಗದಂತೆ ವ್ಯಾಪಾರ ಮಾಡುವ ವ್ಯಾಪಾರದಾರರಿಗೆ ಕರ್ನಾಟಕ ಅವಶ್ಯ ವಸ್ತುಗಳ ಲೈಸೆನ್ಸ್ ಆದೇಶ ೧೯೮೬ ಕೆಳಗೆ ಲೈಸೆನ್ಸ್ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.

ಉ) ಅವಶ್ಯ ವಸ್ತು ಕಾಯಿದೆ ಪ್ರಕಾರ ಆಹಾರ ಇಲಾಖೆ ಜೊತೆಗೆ ಪೋಲೀಸ್ ಮತ್ತು ರೆವಿನ್ಯೂ ಅಧಿಕಾರಿಗಳಿಗೂ ಕಾಯ್ದೆ ಜಾರಿಗೊಳಿಸುವ ಅಧಿಕಾರ ನೀಡಿರುವುದರಿಂದ ಕಾಯ್ದೆ ತಿದ್ದುಪಡಿಯಾಗದೆ ಒಂದೇ ಇಲಾಖೆಯಿಂದ ನಿಯಂತ್ರಿಸಲು ಸಾಧ್ಯವಿಲ್ಲ.

ಕರ್ನಾಟಕ ಸರ್ಕಾರದ ಆರ್ಥಿಕ ವ್ಯವಸ್ಥೆ ಅಭದ್ರತೆ ಬಗ್ಗೆ.

೩೦ ಶ್ರೀ ಆರ್. ವೆಂಕಟರಾವಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧-೬ ೧೯೮೭ ರಿಂದ ೧೫-೬-೧೯೮೭ರವರೆಗೆ ಸರ್ಕಾರಿ ಖಜಾನೆಗಳಲ್ಲಿ ಸರ್ಕಾರಿ ಚೆಕ್ಕುಗಳು ಮಾನ್ಯತೆ ಪಡೆಯದೆ ಹಿಂದಿರುಗಿಸಲ್ಪಟ್ಟಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಸರ್ಕಾರಿ ಹಣಕಾಸು ಪರಿಸ್ಥಿತಿ ಅಭದ್ರವಾಗಿದೆಯೆಂದು ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕಾ ಸಮ್ಮೇಳನದಲ್ಲಿ ಹೇಳಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಹಣಕಾಸಿನ ಪರಿಸ್ಥಿತಿಯನ್ನು ಸರಿಪಡಿಸಲು ತೆಗೆದುಕೊಂಡ ಕ್ರಮಗಳೇನು ?

ಈ) ಸರ್ಕಾರದ ಆರ್ಥಿಕ ವ್ಯವಸ್ಥೆಯ ಭದ್ರತೆ ಬಗ್ಗೆ ಹಾಕಿಕೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಇಲ್ಲ.

ಆ) ಇಲ್ಲ. ಆದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ಯಾರೂ ಆತಂಕ ಪಡಬೇಕಾಗಿಲ್ಲ. ಪರಿಸ್ಥಿತಿ ನಿಭಾಯಿಸಬಲ್ಲೆವು. ಆದರೆ ಹಣಕಾಸಿನ ಪರಿಸ್ಥಿತಿ ಬಹಳ ಸುಭದ್ರವಾಗಿದೆ ಎಂದರ್ಥ ವಲ್ಲ. ನಾನಂ ಯಾವಾಗಲೂ ಆದರಲ್ಲೂ ವಿಶೇಷವಾಗಿ ಬಜೆಟ್ ಭಾಷಣದಲ್ಲಿ ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ಎಲ್ಲವೂ ಚೆನ್ನಾಗಿದೆ ಎಂದು ಚಿತ್ರವನ್ನು ನೀಡಿಲ್ಲ ವೆಂದು ಹೇಳಿಕೆ ನೀಡಿದ್ದೇನೆ.

ಇ) ಮತ್ತು ಈ) ಯೋಜನೇತರ ವೆಚ್ಚದಲ್ಲಿ ಮಿತವ್ಯಯ ಸಾಧಿಸಲು ಸರ್ಕಾರವು ಕಾಲದಿಂದ ಕಾಲಕ್ಕೆ ಮಿತವ್ಯಯ ಆಜ್ಞೆ ಗಳನ್ನು ಜಾರಿಗೆ ತರುತ್ತಿದೆ. ಈ ಮಿತವ್ಯಯ ಕ್ರಮಗಳು ಅಭಿವೃದ್ಧಿ ಕಾರ್ಯಗಳನ್ನು ಮುಂದಂವರಿಸಿಕೊಂಡಂ ಖರ್ಚಿನಲ್ಲಿ ಮಿತವ್ಯಯ ಸಾಧಿ ಸುವ ಗುರಿ ಹೊಂದಿದೆ. ಈ ಕ್ರಮಗಳು ಉಪಕರಣಗಳು, ಯಂತ್ರಗಳು, ಕಂಪ್ಯೂಟರ್‌ಗಳು, ಫೋಟೋಪ್ರತಿ ಯಂತ್ರಗಳು ಮತ್ತು ಮೋಟಾರ್ ಕಾರುಂಗಳನ್ನು ಖರೀದಿಸದೆ ಇರುವುದು, ಹೊಸ ಹುದ್ದೆಯ ಸೃಷ್ಟೀಕರಣ ಮಾಡದೇ ಇರುವುದು, ಖಾಲಿ ಹುದ್ದೆಗಳನ್ನು ತುಂಬದೇ ಇರುವುದು, ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಲೋಕ ಸೇವಾ ಆಯೋಗಕ್ಕೆ ಸೂಚನೆ ಕೊಡದಿರುವುದಂ, ಇವುಗಳನ್ನು ಗುರಿಯಾಗಿ ಹೊಂದಿದೆ.

ರಾಜ್ಯದಲ್ಲಿ ಸಾರಾಯಿ ಮಾರಾಟ ಮಾಡುತ್ತಿರುವ ಬಗ್ಗೆ.

೧೧ ಶ್ರೀ ಗೋಪಾಲ ಮಂಕಾಂದ ಕಾನಡೆ (ಸಿರ್ಸಿ).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಾರಾಯಿ ಮಾರಾಟ ಮಾಡುತ್ತಿರುವ ಗುತ್ತಿಗೆದಾರರು, ಅವರ ಹೆಸರು, ಅವರು ಸರ್ಕಾರದ ಪರವಾನಿಗಿ ಪಡೆದ ವಿವರ ಒದಗಿಸುವುದು?

ಆ) ಸಾರಾಯಿ ಮಾರಾಟ ಮಾಡುವಲ್ಲಿ ಗುತ್ತಿಗೆದಾರರು ಕಲಬೆರಕೆ ಮಾಡಿ ಮಾರಾಟ ಮಾಡು ವುದರಿಂದ ಬಡಜನತೆ ಕಲಬೆರಕೆ ಸಾರಾಯಿ ಕುಡಿದು ಮರಣಹೊಂದುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಸಾರಾಯಿ ಮಾರಾಟ ಮಾಡುವಲ್ಲಿ ಲೀಟರ್ ಒಂದಕ್ಕೆ ಸರ್ಕಾರದವರು ನಿಗದಿಪಡಿಸಿರುವ ಬೆಲೆ ಎಷ್ಟು?

ಈ) ಸಾರಾಯಿ ಮಾರಾಟ ಮಾಡುವಲ್ಲಿ ಚಿಲ್ಲರೆ (ಲೂಸ್) ಮಾರಾಟ ಮಾಡುತ್ತಿರುವುದಕ್ಕೆ ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಉ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಊ) ಹಾಗಿಲ್ಲದಿದ್ದಲ್ಲಿ ಕೂಡಲೇ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಡಿ. ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಆ) ಇತ್ತೀಚಿನ ವರ್ಷಗಳಲ್ಲಿ ಕಲಬೆರಕೆ ಮದ್ಯವನ್ನು ಸೇವಿಸಿ ಜನರು ಮರಣ ಹೊಂದುತ್ತಿರು ವುದಂ ಸರ್ಕಾರದವರ ಗಮನಕ್ಕೆ ಬಂದಿರುವುದಿಲ್ಲ. ಸರ್ಕಾರ, ಕಲಬೆರಕೆ ಮತ್ತು ಗುಣ ತಗ್ಗಿಸುವುದನ್ನು ತಪ್ಪಿಸುವುದಕ್ಕೋಸ್ಕರ ಸಾರಾಯಿಂಯನ್ನು ಸೀಸೆಗಳಲ್ಲಿ ಮಾರಾಟ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ಇ) ಬಾಟಲಿ ಸಾರಾಯಿಯ ಬೆಲೆ ಒಂದಂ ಲೀಟರಿಗೆ ೧೨ ರೂಪಾಯಿ ಆಗುವುದು.

ಈ) ಸಾರಾಯಿಯನ್ನು ಬಾಟ್ಲಿಂಗ್ ಕಂಟ್ರಾಕ್ಟದಾರರಂ ಮೊಹರಾದ ಸೀಸೆಗಳಲ್ಲಿ ಸಾರಾಯಿ ಗುತ್ತಿಗೆದಾರರಿಗೆ ಸರಬರಾಜು ಮಾಡುವರು.